**ದಿನಾಂಕ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಕೆ.ಎಂ.ಕೆ. ಪ್ರತಿವಾದಿಯರ ಪರ ವಕೀಲರಿಂದಃ-**

ನಾನು ಮೊಬೈಲ್ ಅಂಗಡಿಯನ್ನು ಹೊಂದಿದ್ದೇನೆ. ಪ್ರತಿವಾದಿಯರು ತಿ. ನರಸೀಪುರ ಪಟ್ಟಣದ ನಮ್ಮ ಬಡಾವಣೆಯಲ್ಲಿರುವುದರಿಂದ ನನಗೆ ಪರಿಚಯವಿರುತ್ತಾರೆ. ದಾವಾಸ್ತಿಯು ವಾಣಿಜ್ಯ ಸ್ವರೂಪದ ಆಸ್ತಿಯೆಂದರೆ ಸರಿ. ಅದರ ವಿಸ್ತೀರ್ಣ ಅಡಿಯ ರೂಪದಲ್ಲಿ ಎಷ್ಟಿದೆ ಎಂದರೆ 163.50 ಮೀಟರ್ ಇದೆ. ಅದರಲ್ಲಿ ಮೊದಲು ಒಂದು ಹಳೆಯ ಹಂಚಿನ ಮನೆ ಮತ್ತು ಮಳಿಗೆ ಇದ್ದು, ಆ ಮನೆಯನ್ನು ಹೊಡೆದು ಹಾಕಿದ್ದು, ಈಗ ಮಳಿಗೆ ಮಾತ್ರ ಇದೆ. ದಾವಾಸ್ತಿಯಲ್ಲಿರುವ ಖಾಲಿ ಜಾಗವನ್ನು ತಳ್ಳುವ ಗಾಡಿಯವರಿಗೆ ಬಾಡಿಗೆಗೆ ನೀಡಿದ್ದು, ಅದರಿಂದ ತಿಂಗಳಿಗೆ ರೂ.3,000-00 ಬಾಡಿಗೆಯು ಪ್ರತಿವಾದಿಯರಿಗೆ ಬರುತ್ತದೆ ಎಂದರೆ ಬಾಡಿಗೆ ಬಗ್ಗೆ ನನಗೆ ಮಾಹಿತಿ ಇಲ್ಲ, ದಾವಾಸ್ತಿಯಲ್ಲಿ ಖಾಲಿ ಜಾಗವಿರುವುದರಿಂದ ಅಲ್ಲಿ ತಳ್ಳುವ ಗಾಡಿಯನ್ನ ನಿಲ್ಲಿಸಿಕೊಳ್ಳುತ್ತಾರೆ. ದಾವಾಸ್ತಿಯಲ್ಲಿರುವ ಮಳಿಗೆಯಲ್ಲಿ ಹಲ್ಲರ್ ಮಿಲ್ ನಡೆಯುತ್ತಿದೆ ಎಂದರೆ ಮೊದಲು ನಡೆಯುತ್ತಿರಲಿಲ್ಲ, ಈಗ ನಡೆಯುತ್ತಿದೆ. ಎಷ್ಟು ದಿನಗಳಿಂದ ಆ ಮಿಲ್ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಆ ಮಿಲ್‌ನ್ನು ಬಹಳ ವರ್ಷಗಳಿಂದ ನಡೆಸುತ್ತಿದ್ದು, ಆ ರೀತಿ ನಡೆಸುತ್ತಿರುವವರು ಪ್ರತಿವಾದಿಯರಿಗೆ ತಿಂಗಳಿಗೆ ರೂ.5000-00 ಬಾಡಿಗೆ ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ತಮ್ಮ ಜೀವನಕ್ಕೆ ಏನು ಕೆಲಸ ಮಾಡುತ್ತಿದ್ದಾರೆ ಎಂದರೆ 2ನೇ ಪ್ರತಿವಾದಿಯು ಕೆಲಸಕ್ಕೆ ಹೋಗುತ್ತಿದ್ದಾರೆ ಎಂಬ ಮಾಹಿತಿ ಇದೆ. ಆಕೆಗೆ

ವಿವಾಹವಾಗಿಲ್ಲ. ಪ್ರತಿವಾದಿಯರಿಗೆ ದಾವಾಸ್ತಿಯನ್ನು ಹೊರತುಪಡಿಸಿ ಆದಾಯ ಬರುವಂತಹ ಬೇರೆ ಆಸ್ತಿಯಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

1ನೇ ಪ್ರತಿವಾದಿಯ ಗಂಡ ಮರಣ ಹೊಂದಿ ಎಷ್ಟು ವರ್ಷಗಳಾಗಿವೆ ಎಂದರೆ ನಾನು ಚಿಕ್ಕವನಾಗಿದ್ದಾಗ ಅವರು ಮರಣ ಹೊಂದಿದ್ದು, ಎಷ್ಟು ವರ್ಷಗಳಾಗಿವೆ ನನಗೆ ಗೊತ್ತಿಲ್ಲ. ಅವರ ಮರಣದ ನಂತರ ದಾವಾಸ್ತಿಯು 1ನೇ ಪ್ರತಿವಾದಿಗೆ ಪೌತಿ ಖಾತೆಯಾಗಿದೆ ಎಂದರೆ ಸರಿ. ಪ್ರತಿವಾದಿಯರು ಯಾವುದೇ ಕೆಲಸಕ್ಕೆ ಹೋಗದೆ ದಾವಾಸ್ತಿಯಿಂದ ಬರುತ್ತಿರುವ ಬಾಡಿಗೆ ಹಣದಿಂದ ಜೀವನ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾಸ್ತಿಯನ್ನು ಮಾರಾಟ ಮಾಡುವ ಕುರಿತು ಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿತ್ತಾ ಅಥವಾ ನನಗೆ ಹೇಗೆ ತಿಳಿಯಿತು ಎಂದರೆ ಶರತ್ ಎನ್ನುವವರ ಮೂಲಕ ಆ ಕುರಿತು ತಿಳಿದಿದ್ದು, 3ನೇ ಪ್ರತಿವಾದಿಯ ವಿವಾಹದ ಖರ್ಚಿಗಾಗಿ ದಾವಾಸ್ತಿಯನ್ನು ಮಾರಾಟ ಮಾಡಲು ಪ್ರತಿವಾದಿಯರು ಪ್ರಸ್ತಾಪಿಸಿದ್ದಾರೆ ಎಂದು ಸದರಿ ಶರತ್‌ರವರ ಮೂಲಕ ತಿಳಿದಿದ್ದು, ನಾನು ದಾಖಲೆಗಳನ್ನು ಪರಿಶೀಲಿಸಿ ದಾವಾಸ್ತಿಯನ್ನು ಖರೀದಿಸಲು ಮುಂದಾಗಿದ್ದೆ. 3ನೇ ಪ್ರತಿವಾದಿಯ ವಿವಾಹವು ಯಾವಾಗ ನಿಗದಿಯಾಗಿತ್ತು ಎಂದು ನನಗೆ ಮಾಹಿತಿ ಇಲ್ಲ.

ದಾವಾಸ್ತಿಯನ್ನು ಖರೀದಿಸುವ ಪೂರ್ವದ ಮಾತುಕತೆಯ ವೇಳೆಗೆ ನಾನು, ಸದರಿ ಶರತ್ ಮತ್ತು ಪ್ರತಿವಾದಿಯರು ಸೇರಿದ್ದೆವು. ಆ ರೀತಿಯಾಗಿ ಕ್ರಯದ ಕರಾರು ಆಗುವ ಒಂದು ವಾರದ ಹಿಂದೆ ಸೇರಿದ್ದೆವು. ದಾವಾಸ್ತಿಯನ್ನು ಖರೀದಿಸಲು

ರೂ.25,34,000-00 ಕ್ಕೆ ಮಾತುಕತೆಯಾಗಿತ್ತು. ಕ್ರಯದ ಕರಾರಿನ ದಿನ ನಾನು ಪ್ರತಿವಾದಿಯರಿಗೆ ರೂ.4,50,000-00 ಮೊತ್ತಕ್ಕೆ ಒಂದು ಚೆಕ್ ನೀಡಿದ್ದೆ. ಕ್ರಯಪತ್ರವನ್ನು ನೊಂದಣಿ ಮಾಡಿಸಲು ಕ್ರಯದ ಕರಾರು ಆದ ಒಂದು ವರ್ಷದ ಒಳಗೆ ಎಂದು ಕರಾರಿನಲ್ಲಿ ನಮೂದಿಸಲಾಗಿತ್ತು. ಕ್ರಯದ ಕರಾರಿನ ನೊಂದಣಿ ದಿನಾಂಕವನ್ನು ಕ್ರಯದ ಮಾತುಕತೆಗೆ ಕುಳಿತ ದಿನವೆ ನಿಗದಿ ಮಾಡಲಾಗಿತ್ತು.

ಕ್ರಯದ ಕರಾರನ್ನು ನೊಂದಣಿ ಮಾಡಿಸಿಕೊಂಡ ದಿನವೆ ಕ್ರಯಪತ್ರವನ್ನು ಬರೆಸಿಕೊಳ್ಳುವಷ್ಟು ದಾವಾಸ್ತಿಯ ದಾಖಲೆಗಳು ಲಭ್ಯವಿದ್ದವು ಎಂದರೆ ಸರಿ. ಹಾಗಾಗಿ, ಕ್ರಯದ ಕರಾರಿನ ದಿನವೇ ನಾನು ಕ್ರಯದ ಸಂಪೂರ್ಣ ಹಣವನ್ನು ಪ್ರತಿವಾದಿಯರಿಗೆ ನೀಡಿ ಕ್ರಯಪತ್ರವನ್ನು ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಹಣವನ್ನು ಹೊಂದಿಸಲು ನನಗೆ ಸಮಯ ಅಗತ್ಯವಿದ್ದುದರಿಂದ ಆ ದಿನ ಕ್ರಯಪತ್ರ ಬರೆಸಿಕೊಳ್ಳಲು ತೊಂದರೆ ಇತ್ತು. ಆ ವಿಷಯವನ್ನು ನಿಪಿ.1 ರ ಕ್ರಯದ ಕರಾರು ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ನಿಪಿ.1 ನ್ನು ಮಾಡಿಕೊಂಡ ದಿನದ ಸಂಜೆ 5 ರಿಂದ 5.30 ಗಂಟೆ ಸಮಯದಲ್ಲಿ 1ನೇ ಪ್ರತಿವಾದಿಯು ತಮಗೆ ಹೆಚ್ಚುವರಿ ಹಣ ಬೇಕು ಎಂದು ನನ್ನನ್ನು ಕೋರಿದ್ದು, ನಾನು ಮರುದಿನ ಹೊಂದಿಸಿಕೊಡುವುದಾಗಿ ಹೇಳಿದ್ದೆ. ನಿಪಿ.1 ಬೆಳಿಗ್ಗೆ 11.30 ಗಂಟೆಗೆ ನೊಂದಣಿ ಆಗಿರುತ್ತದೆ. ಅದನ್ನು ನೊಂದಣಿ ಮಾಡಿಕೊಂಡ ವೇಳೆಗೆ ನನ್ನ ಬಳಿ ನಗದು ಇರಲಿಲ್ಲವಾ ಎಂದರೆ ನನ್ನ ಖಾತೆಯಲ್ಲಿತ್ತು.

ನಿಪಿ.2 ರಲ್ಲಿ ನಮೂದಿಸಿರುವ ಮೊತ್ತವಾದ ರೂ.7,50,000-00 ವನ್ನು ನಗದಾಗಿ ನೀಡಿರುತ್ತೇನೆ ಎಂದು ಅದರಲ್ಲಿ ತೋರಿಸಲಾಗಿದೆ ಎಂದರೆ ಸರಿ. ನಿಪಿ.2 ರ ಛಾಪಾ ಕಾಗದವನ್ನು1ನೇ ಪ್ರತಿವಾದಿಯು ತಂದಿರುತ್ತಾರೆ. ಅದನ್ನು ಅವರೇ ಸಿದ್ದಪಡಿಸಿಕೊಂಡು ತಂದಿದ್ದರು. ನಾನು ಅದನ್ನು ಓದಿ ಸಹಿ ಮಾಡಿದ್ದೆ. ಅದನ್ನು 1ನೇ ಪ್ರತಿವಾದಿಯು ನೋಟರಿ ಮಾಡಿಸಿದ್ದಾರೆ. ಅದಕ್ಕೆ ಸಹಿಯನ್ನು ವಕೀಲರಾದ ಮತ್ತು ನೋಟರಿಯಾದ ಶ್ರೀ ಸಿದ್ದಪ್ಪಾಜಿ ರವರ ಕಚೇರಿಯಲ್ಲಿ ನಾನು ಹಾಕಿರುತ್ತೇನೆ. ಅದೇ ರೀತಿ ಅದಕ್ಕೆ ಸಹಿಯನ್ನು ಪ್ರತಿವಾದಿಯರು, ಸಾಕ್ಷಿದಾರರಾದ ಸದರಿ ಶರತ್ ಕುಮಾರ್ ರವರು ಮತ್ತು ಮೋಹನ್ ಕುಮಾರ್ ರವರು ಹಾಕಿರುತ್ತಾರೆ.

ನಿಪಿ.1 ರ ಕ್ರಯದ ಕರಾರಿನಲ್ಲಿ ದಾವಾಸ್ತಿಯನ್ನು 3ನೇ ಪ್ರತಿವಾದಿಯ ವಿವಾಹದ ಖರ್ಚನ್ನು ಭರಿಸಲು ಮಾರಾಟ ಮಾಡಲಾಗುತ್ತಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ.2 ನ್ನು ಬರೆಸುವಾಗ ಅದರಲ್ಲಿ 2ನೇ ಪ್ರತಿವಾದಿಯ ವಿವಾಹದ ಖರ್ಚಿಗೆ ಹೆಚ್ಚುವರಿ ಹಣ ಬೇಕು ಎಂದು ನಮೂದಿಸಿದ್ದು, ಆ ವಿಷಯವನ್ನು ನಿಪಿ.1 ರಲ್ಲಿ ಬರೆಸದೆ ನಿಪಿ.2 ರಲ್ಲಿ ಏಕೆ ಬರೆಸಲಾಗಿದೆ ಎಂದು ಕೇಳಿದ್ದೀರಾ ಎಂದರೆ, ನಿಪಿ.1ನ್ನು ಬರೆಸುವಾಗ ಆ ವಿಷಯವನ್ನು ನನಗೆ ಹೇಳಿದ್ದರು.

ದಿನಾಂಕ 22.10.2022 ರಂದು ಬೆಳಿಗ್ಗೆ 11.30 ಗಂಟೆಗೆ ನಿಪಿ.1 ನೊಂದಣಿ ಆಗಿದ್ದು, ಅದೇ ದಿನ ಸಂಜೆ 5.00 ರಿಂದ 5.30 ಗಂಟೆ ಸಮಯದಲ್ಲಿ ಹೆಚ್ಚುವರಿ ಹಣ ಬೇಕು ಎಂದು ಪ್ರತಿವಾದಿಯರು ನನ್ನನ್ನು ಕೇಳಿದಾಗ ಅವರಿಗೆ ಮರುದಿನ ಹಣ ಹೊಂದಿಸಿಕೊಡುವುದಾಗಿ ಹೇಳಿದ್ದು, ಅದಕ್ಕೆ ಪೂರಕವಾಗಿ ಪತ್ರ

ತರುವಂತೆ ನಾನು ಹೇಳಿದ್ದೆ ಎಂದರೆ ಸರಿ. ಆದರೆ ನಿಪಿ.2 ರಲ್ಲಿ ಅದರ ಖರೀದಿಯ ದಿನಾಂಕ 22.10.2020 ಬೆಳಿಗ್ಗೆ 10.32 ಗಂಟೆಯೆಂದು ನಮೂದು ಇದೆ ಎಂದರೆ ಪ್ರತಿವಾದಿಯರು ಅದೇ ದಿನ ಮತ್ತು ಸಮಯದಲ್ಲಿ ಅದನ್ನು ಖರೀದಿಸಿ ಇಟ್ಟುಕೊಂಡಿರಬಹುದು, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ.

ನಿಪಿ.1 ನೊಂದಣಿಯಾಗುವವರೆಗೂ ಹೆಚ್ಚುವರಿ ಹಣದ ಬಗ್ಗೆ ಮಾತುಕತೆಯಾಗಿರಲಿಲ್ಲ ಎಂದರೆ ಸರಿ. ನಿಪಿ.2 ರ ಛಾಪಾ ಕಾಗದವನ್ನು ನಾನು 1ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿ ತಂದಿದ್ದೆ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ ಹಣದ ಅವಶ್ಯಕತೆಯಿದ್ದುದರಿಂದ ಅವರು ನನ್ನ ತಂದೆಯ ಬಳಿ ರೂ.4,50,000-00 ಸಾಲವನ್ನು ಬಡ್ಡಿಗೆ ಕೊಡುವಂತೆ ಕೇಳಿದ್ದು, ನನ್ನ ತಂದೆಯು ಕೂಡ ಅದಕ್ಕೆ ಒಪ್ಪಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮೊದಲು ಚಿಲ್ಲರೆ ಅಂಗಡಿ ಹೊಂದಿದ್ದು, ಈಗ ನನಗೆ ಕೆಲವೊಮ್ಮೆ ಸಹಾಯ ಮಾಡುತ್ತಾರೆ.

ನಾನು ಆದಾಯ ತೆರಿಗೆ ಪಾವತಿದಾರ. ನಿಪಿ.2 ನ್ನು ಮಾಡಿಕೊಂಡ ವರ್ಷವಾದ 2020-21 ಕ್ಕೆ ಪ್ರತಿವಾದಿಯರಿಗೆ ನೀಡಿರುವ ರೂ.7,50,000-00 ಹಣದ ಕುರಿತು ನನ್ನ ಆದಾಯ ತೆರಿಗೆ ವಿವರದಲ್ಲಿ ತೋರಿಸಿದ್ದೇನೆ. ಹಾಗಾಗಿ, ಆ ವಿವರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಿಪಿ.2ನ್ನು ಮಾಡಿಕೊಂಡ ದಿನ ನನ್ನ ಬಳಿ ರೂ.7,50,000-00 ನಗದು ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ, ಆದರೆ ನಗದು ಇತ್ತು.

ನನ್ನ ತಂದೆಯ ಹೆಸರಿಗೆ ಪ್ರತಿವಾದಿಯರು ಸಾಲಕ್ಕೆ ಭದ್ರತೆಯಾಗಿ ಪತ್ರವನ್ನು ಬರೆದುಕೊಡುವುದು ಬೇಡ ಎಂದು ಅವರು ಹೇಳಿದ್ದು, ಅವರಿಗೆ ವಯಸ್ಸಾಗಿರುವ ಕಾರಣ ನನ್ನ ಹೆಸರಿಗೆ ಆ ಪತ್ರವನ್ನು ಬರೆದುಕೊಡಿ ಎಂದು ಪ್ರತಿವಾದಿಯರಿಗೆ ಹೇಳಿದಾಗ ನಾನು ನಿಪಿ.1 ರಂತೆ ಕ್ರಯದ ಕರಾರು ಪತ್ರವನ್ನು ಸಿದ್ಧಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಲದ ಭದ್ರತೆಯ ಪತ್ರದ ಬದಲು ಕ್ರಯದ ಕರಾರು ಪತ್ರವನ್ನು ಮಾಡುವ ಕುರಿತು ಪ್ರತಿವಾದಿಯರು ಆಕ್ಷೇಪಿಸಿದಾಗ ಸಾಲದ ಹಣವನ್ನು ಮರುಪಾವತಿಸಿದ ನಂತರ ಆ ಕ್ರಯದ ಕರಾರು ಪತ್ರವನ್ನು ರದ್ದುಪಡಿಸುವುದಾಗಿ ನಾನು ಪ್ರತಿವಾದಿಯರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಪ್ರತಿವಾದಿಯರ ಸಹಿಯನ್ನು ಪಡೆಯುವಾಗ ಅದು ಖಾಲಿಯಿದ್ದು, ನಿಪಿ.1ರ ಜೊತೆ ಅದನ್ನು ಇಟ್ಟು ಅವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ಪ್ರಕಾರ ನಾನು ಪ್ರತಿವಾದಿಯರಿಗೆ ರೂ.7,50,000-00 ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಸಾಕ್ಷಿದಾರರಾಗಿ ನಮೂದಿಸಿರುವ ವ್ಯಕ್ತಿಗಳ ಮೂಲಕ ನ್ಯಾಯಾಲಯಕ್ಕೆ ಸಾಕ್ಷ್ಯ ಕೊಡಿಸಲು ನನಗೆ ತೊಂದರೆ ಇಲ್ಲ.

ನಾನು ಮತ್ತು ನನ್ನ ತಂದೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದು, ನೀಡಿದ ಸಾಲಕ್ಕೆ ಕ್ರಯದ ಕರಾರು ಪತ್ರಗಳಂತಹ ದಾಖಲೆಗಳನ್ನು ಸೃಷ್ಟಿಸಿ ಅವುಗಳ ಮೇಲೆ ಸಾಲ ಪಡೆದವರ ವಿರುದ್ಧ ಬಹಳಷ್ಟು ಪ್ರಕರಣಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಕ್ರಯದ ಕರಾರಿನ ವೇಳೆಗೆ ಕ್ರಯಪತ್ರ ಮಾಡಲು ಎಲ್ಲಾ ದಾಖಲೆಗಳು ಸಿದ್ಧವಿದ್ದ ಕಾರಣ ನನ್ನ ವಾದಪತ್ರದ ಖಂಡಿಕೆ 4 ರಲ್ಲಿ ಹೇಳುವಂತೆ ಪ್ರತಿವಾದಿಯರು

ಪೂರಕ ದಾಖಲೆಗಳನ್ನು ಸಿದ್ದಪಡಿಸಲು ಹೆಚ್ಚಿನ ಸಮಯವನ್ನು ಕೋರಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ದಾವಾಸ್ತಿಯು ನಿವೇಶನ ಮತ್ತು ಕಟ್ಟಡದ ಆಸ್ತಿಯಾಗಿರುವುದರಿಂದ ಅದನ್ನು ಕ್ರಯ ಮಾಡಿಕೊಳ್ಳುವ ವೇಳೆಗೆ ಅದರ ಇ-ಖಾತಾ ಪ್ರತಿ ಮತ್ತು ಕಂದಾಯ ಪಾವತಿ ರಶೀದಿ ಸಾಕಾಗಿದ್ದು, ಕ್ರಯದ ಕರಾರಿನ ದಿನವೆ ಆ ದಾಖಲೆಗಳು ಲಭ್ಯವಿದ್ದು, ಅದೇ ದಿನ ಕ್ರಯಪತ್ರ ಮಾಡಬಹುದಿತ್ತಲ್ಲವಾ ಎಂದರೆ ಹೆಚ್ಚಿನ ದಾಖಲೆಗಳು ಬೇಕು ಎಂದು ಭಾವಿಸಿ ಕ್ರಯಪತ್ರವನ್ನು ಆ ದಿನ ಮಾಡಿಲ್ಲ.

ನಿಪಿ.1 ನ್ನು ನೊಂದಣಿ ಮಾಡಿಕೊಂಡ ದಿನವೇ ನಿಪಿ.13 ರ ಇ-ಖಾತಾ ಪ್ರತಿಯನ್ನು 1ನೇ ಪ್ರತಿವಾದಿಯು ನನಗೆ ನೀಡಿದ್ದರು. ಆ ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವ ದಾಖಲೆ ಬೇಕು ಎಂದು ನಾನು ಪ್ರತಿವಾದಿಯರನ್ನು ಕೇಳಿದ್ದೆ ಎಂದರೆ ಬೇರೆ ದಾಖಲೆ ಬೇಕಾದಲ್ಲಿ ಕ್ರಯಪತ್ರದ ವೇಳೆಗೆ ಓದಗಿಸಬೇಕು ಎಂದು ಅವರಿಗೆ ಹೇಳಿದ್ದೆ, ಆದರೆ ಅವರು ನೀಡಿರುವ ದಾಖಲೆಗಳು ಸಾಕು ಎಂದು ಪರಿಗಣಿಸಿ ಕ್ರಯಪತ್ರ ಬರೆಸಿಕೊಳ್ಳಲು ಮುಂದಾಗಿದ್ದೆ.

ನಾನು ಮತ್ತು ನನ್ನ ತಂದೆ ಲೇವಾದೇವಿ ವ್ಯವಹಾರ ಮಾಡಲು ಪರವಾನಗಿಯನ್ನು ಪಡೆಯದ ಕಾರಣ ಈ ಮೇಲೆ ಹೇಳಿದಂತೆ ಸಾಲದ ವ್ಯವಹಾರಕ್ಕೆ ಕ್ರಯದ ಕರಾರು ಪತ್ರಗಳನ್ನು ಬರೆಸಿಕೊಂಡಿದ್ದೆವು ಎಂದರೆ ಸರಿಯಲ್ಲ.

ನಿಪಿ.1 ಆದ ದಿನಾಂಕದಿಂದ ಪ್ರತಿವಾದಿಯರು ಪಡೆದಿದ್ದ ರೂ.4,50,000-00 ಸಾಲದ ಮೊತ್ತಕ್ಕೆ ಶೇಕಡ 2ರಂತೆ ಪ್ರತಿ ತಿಂಗಳು ರೂ.9,000-00 ಬಡ್ಡಿಯನ್ನು

ಅವರು ಸದರಿ ಶರತ್‌ರವರ ಸಮಕ್ಷಮ ನನ್ನ ತಂದೆಗೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ತಿಯ ಮಾರುಕಟ್ಟೆ ಬೆಲೆ ರೂ.1,50,00,000-00 ಇರುವುದರಿಂದ ಅದನ್ನು ಪ್ರತಿವಾದಿಯರು ಮಾರಾಟ ಮಾಡಬೇಕು ಎಂದು ಯಾವಾಗಲೂ ಪ್ರಸ್ತಾಪಿಸಿಲ್ಲ ಎಂದರೆ ಸರಿಯಲ್ಲ.

ನಿಪಿ.1 ಮತ್ತು 2 ರ ಪ್ರಕಾರ ನಾನು ಪ್ರತಿವಾದಿಯರಿಗೆ ಕೊಡಬೇಕಾದ ಉಳಿದ ಕ್ರಯದ ಹಣ ನನ್ನ ಬಳಿ ಈ ದಾವಾವನ್ನು ದಾಖಲಿಸುವ ವೇಳೆಗೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಅದೇ ರೀತಿ ನಿಪಿ.8 ಮತ್ತು 9 ನ್ನು ಪ್ರತಿವಾದಿಯರಿಗೆ ನೀಡುವ ವೇಳೆಗೆ ಆ ರೀತಿ ಹಣ ನನ್ನ ಬಳಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಆ ಹಣವನ್ನು ನ್ಯಾಯಾಲಯಕ್ಕೆ ಪಾವತಿಸುತ್ತೇನೆ ಎಂದು ಕೋರಿ ಅರ್ಜಿ ಸಲ್ಲಿಸಿ ನ್ಯಾಯಾಲಯದ ಅನುಮತಿ ಪಡೆದು ಹಣವನ್ನು ಪಾವತಿಸಿಲ್ಲ. ನಿಪಿ.8 ನ್ನು ನಾನು ಪ್ರತಿವಾದಿಯರಿಗೆ ನೀಡುವ ವೇಳೆಗೆ ನನ್ನ ಬಳಿ ಕ್ರಯದ ಬಾಕಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ನೋಟೀಸ್‌ನ್ನು ನಾನು ಅವರಿಗೆ ನೀಡಿದ ನಂತರ ಪ್ರತಿವಾದಿಯರು ನನಗೆ ಪ್ರತ್ಯುತ್ತರ ನೀಡಿಲ್ಲ ಮತ್ತು ಅವರು ನನ್ನನ್ನು ಭೇಟಿಯಾಗಿಲ್ಲ ಎಂದರೆ ಸರಿ. ಆ ನೋಟೀಸ್‌ನ್ನು ನೀಡಿದ ದಿನಾಂಕ 02.08.2021 ರಿಂದ ನಿಪಿ.9 ರ ನೋಟೀಸ್ ದಿನಾಂಕ 01.06.2023 ರವರೆಗೂ ನನ್ನ ಬಳಿ ಆ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ಅವಧಿಯಲ್ಲಿ ಪ್ರತಿವಾದಿಯರು ಸಾಲಕ್ಕೆ ಬಡ್ಡಿಯನ್ನು ನಮಗೆ

ಪಾವತಿಸಿದ್ದರಿಂದ ನಾನು ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.9 ರ ನೋಟೀಸ್ ಪ್ರತಿವಾದಿಯರಿಗೆ ಜಾರಿಯಾದ ನಂತರ ಅವರು ನನ್ನನ್ನು ಭೇಟಿಯಾಗಿ ಅವರು ನನ್ನ ತಂದೆಯಿಂದ ಪಡೆದಿದ್ದ ಸಾಲದ ಹಣ ಮತ್ತು ಬಡ್ಡಿಯನ್ನು ಪಾವತಿಸುವುದಾಗಿ ಅವರು ನನಗೆ ಹೇಳಿದ್ದು, ನಾನು ಅವರಿಗೆ ಸಮ್ಮತಿಸಿದ್ದು, ಆದರೆ ನಾನು ಅವರ ವಿರುದ್ಧ ಈ ದಾವಾವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಪ್ರತಿವಾದಿಯರು ನನ್ನಿಂದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಡಿಯಲ್ಲಿ ನೀಡಿರುವ ಹಣ ಸಾಲದ ಹಣವಾಗಿದ್ದು, ದಾವಾಸ್ತಿಯ ಮಾರಾಟದ ಹಣ ಅಲ್ಲ ಎಂದರೆ ಸರಿಯಲ್ಲ. ಸತ್ಯವನ್ನು ಮರೆಮಾಚಿ ಪ್ರತಿವಾದಿಯರ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅವರು ಈಗಲೂ ಕೂಡ ತಾವು ಪಡೆದಿರುವ ಸಾಲದ ಹಣವನ್ನು ಬಡ್ಡಿಸಹಿತ ಮರುಪಾವತಿಸಲು ಬದ್ದರಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ**